# ಬಂಧನದಿಂದ ಬಿಡಿಸು



ನೃಪದತ್ತಪುರದ ರಾಜಬೀದಿಯಲ್ಲಿದ್ದ ಪಕ್ಷಿ ಮಾರಾಟ ಮಳಿಗೆಯ ಮುಂಭಾಗದಲ್ಲಿಯೇ ಪಂಜರವನ್ನು ನೇತು ಹಾಕಿರುತ್ತಿದ್ದರು. ಒಂದು ಪಂಜರದಲ್ಲಿ ಕುಳಿತಿದ್ದ ಗಿಳಿ ದಾರಿಹೋಕರ ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು. ಕಾರಣ ಏನೆಂದರೆ ಅದರ ನುಡಿಗಳು. ಅದು ‘ಬೇಗ ಬಾ, ನನ್ನನ್ನು ಬಂಧನದಿಂದ ಬಿಡಿಸು’ ಎಂದು ವಿನಂತಿ ಮಾಡುತ್ತಿತ್ತು. ಅವತ್ತೇ ಆ ಪಕ್ಷಿಯು ವ್ಯಾಪಾರಿಯ ಕೈ ಸೇರಿತ್ತು. ಅದನ್ನು ಅವನು ಎಲ್ಲ ಪಕ್ಷಿಗಳಂತೆ ಮಾರಾಟಕ್ಕೆ ಇಟ್ಟಿದ್ದ. ಆದರೆ ಆ ಗಿಳಿಗೆ ನಿಗದಿ ಪಡಿಸಿದ ದರ ಹೆಚ್ಚಿದ್ದರಿಂದ ಬಂದ ಗಿರಾಕಿಗಳು ವಿಚಾರಿಸಿಕೊಂಡು ಹಾಗೇ ಹೋಗುತ್ತಿದ್ದವು.

ಸಂಜೆಯಾದರೂ ಆ ಪಕ್ಷಿಯನ್ನು ಯಾರೂ ಕೊಳ್ಳಲಿಲ್ಲ. ಅಂಗಡಿಯಾತ ತನ್ನ ಅಂಗಡಿಯನ್ನು ಬಂದ್ ಮಾಡಿ ಮನೆಗೆ ಹೊರಟ. ಅಂದು ರಾತ್ರಿ ಆ ರಾಜ್ಯದ ರಾಜ ರವಿತೇಜ, ಮಂತ್ರಿ ಮಹಾಬುದ್ಧಿಯ ಜೊತೆ ಮಾರುವೇಷದಲ್ಲಿ ಸಂಚರಿಸುತ್ತಾ ಅದೇ ಬೀದಿಯಲ್ಲಿ ಬಂದರು. ಇನ್ನೇನು ಮುಂದಡಿ ಇಡಬೇಕು ಅಂತಿರುವಾಗ ಮಂತ್ರಿ ಮಹಾಬುದ್ಧಿ ನಿಂತ. ಮತ್ತೊಮ್ಮೆ ಗಿಳಿಯ

**■ ರವಿರಾಜ ಹಾಲಂಬಿ**

ಕಲೆ: ಸಂತೋಷ್ ಸಸಿಹಿತ್ಲು

ಮಾತು ಕೇಳಿದ. ‘ಮಹಾರಾಜಾ, ಗಿಳಿಯ ಧ್ವನಿಯನ್ನು ಒಮ್ಮೆ ಕಿವಿಗೊಟ್ಟು ಆಲಿಸಿ ನೋಡಿ. ಭಯ ಹಾಗೂ ದೈನ್ಯತೆಯಿಂದ ಕೂಡಿದೆ. ಅನುಮಾನಾಸ್ಪದವಾಗಿದೆಯಲ್ಲವಾ?’ ಎಂದು ವಿನಂತಿಸಿದ.

ರಾಜಾ ರವಿತೇಜನಿಗೆ ಅರ್ಥವಾಯಿತು. ತಕ್ಷಣ ಅಂಗಡಿಯ ಮಾಲೀಕನನ್ನು ಕರೆಸಿ ‘ನಿಜ ಹೇಳು, ನೀನೇ ಇದನ್ನು ಸಾಕಿದವನಾ ಅಥವಾ ಯಾರಿಂದಲಾದರೂ ಖರೀದಿ ಮಾಡಿದ್ದಾ’ ಎಂದು ವಿಚಾರಿಸಿದರು.

ಅಧಿಕಾರಯುತ ಮಾತನ್ನು ಕೇಳಿದ ತಕ್ಷಣ ಆ ವರ್ತಕನ ಜಂಘಾಬಲವೇ ಉಡುಗಿದಂತಾಗಿ ತಾನು ಅಂದೇ ಬೆಳಿಗ್ಗೆ ಪಕ್ಷಿ ಮಾರಾಟಗಾರನೊಬ್ಬನಿಂದ ಖರೀದಿ ಮಾಡಿದ್ದಾಗಿ ತೊದಲುತ್ತ ಹೇಳಿದ ಮತ್ತು ಅವನ ವಿಳಾಸವನ್ನೂ ನೀಡಿದ.

ರಾಜ ಮತ್ತು ಮಂತ್ರಿ ಅಲ್ಲಲ್ಲಿ ಪಹರೆಯಲ್ಲಿದ್ದ ರಾಜಭಟರನ್ನು ಒಂದುಗೂಡಿಸಿ ಆ ಪಕ್ಷಿ ಮಾರಾಟಗಾರನ ಮನೆ ಪತ್ತೆ ಮಾಡಿ ಮುತ್ತಿಗೆ ಹಾಕಿದರು. ಮನೆ ಮುತ್ತಿದ ಸೈನಿಕರ ಕಂಡು ಹೆದರಿ ಓಡಿ ಹೋಗಲು ಯತ್ನಿಸಿದವನ ಬಂಧಿಸಲಾಯ್ತು. ಮನೆಯ ಮೂಲೆ ಮೂಲೆ ಶೋಧಿಸಿದಾಗ ಮಂತ್ರಿ ಮತ್ತು ರಾಜ ಅನುಮಾನ ಪಟ್ಟಿದ್ದು ನಿಜವಾಯ್ತು. ಅಲ್ಲೊಬ್ಬ ಹುಡುಗ ಬಂಧಿಯಾಗಿದ್ದ. ‘ದೇವರೇ, ಬೇಗ ಬಾ ನನ್ನನ್ನು ಬಂಧನದಿಂದ ಬಿಡಿಸು’ ಎಂದು ದಯನೀಯ ದನಿಯಲ್ಲಿ ಬೇಡುತ್ತಿದ್ದ. ಅವನ ಮಾತನ್ನು ಅದೇ ಮನೆಯಲ್ಲಿ ಮಾರಾಟಕ್ಕೆ ಹಿಡಿದಿಟ್ಟಿದ್ದ ಗಿಳಿಗಳಲ್ಲೊಂದಾದ ಮಾತನಾಡುತ್ತಿದ್ದ ಆ ಗಿಳಿ ಕಲಿತು ನುಡಿಯುತ್ತಿತ್ತು!

ಬಂಧಮುಕ್ತನಾದ ಹುಡುಗ ಪಕ್ಕದ ಶಂಕರಪುರ ರಾಜ್ಯದ ರಾಜಕುಮಾರನಾಗಿದ್ದ. ದುಷ್ಟರು ಅಪಹರಿಸಿ ಹಣಕ್ಕಾಗಿ ಶಂಕರಪುರದರಸನನ್ನು ಪೀಡಿಸುತ್ತಿದ್ದರು. ಪಕ್ಷಿ ಮಾರಾಟಗಾರನಿಂದ ಮಾಹಿತಿಯನ್ನು ಕಕ್ಕಿಸಿ ಕೇಡುಗರೆಲ್ಲರ ಬಂಧನ ಮಾಡಲಾಯಿತು. ರಾಜಾ ರವಿತೇಜ ಹಾಗೂ ಶಂಕರಪುರದರಸನ ಸ್ನೇಹ ಇದರಿಂದಾಗಿ ಮತ್ತಷ್ಟು ಗಟ್ಟಿಯಾಗಿ ರಾಜ್ಯಕ್ಕೆ ಶತ್ರುಭಯ ಇಲ್ಲದಾಗಿ ನೆಮ್ಮದಿ ಇಮ್ಮಡಿಯಾಯ್ತು. ■